


# ಕತ್ತಲ ಶಪಿಸದೆ ದೀಪ ಹಚ್ಚೋಣ

ಶಿವನಕೆರೆ ಬಸವಲಿಂಗಪ್ಪ

ಒಬ್ಬನೇ ಒಬ್ಬ ವ್ಯಕ್ತಿ ನಿಜವಾಗಿ ಮನಸ್ಸು ಮಾಡಿದರೆ ಭ್ರಷ್ಟಾಚಾರ ನಿರ್ಮೂಲನೆಯಾಗಲಿ, ಪರಿಸರ ಮಾಲಿನ್ಯವಾಗಲಿ, ಮೂಢ ನಂಬಿಕೆಗಳನ್ನಾಗಲಿ ನಿರ್ನಾಮಗೊಳಿಸುವುದು ಕಷ್ಟವೇನಲ್ಲ. ಅಲ್ಲಲ್ಲಿ ಸಾಕಷ್ಟು ಜನ ಉತ್ಸಾಹಶಾಲಿ ಯುವಜನರು ಸಾಮಾಜಿಕ ಕಾಳಜಿಯಿಂದ, ದೇಶಪ್ರೇಮದ ತುಡಿತದಿಂದ ನಮ್ಮ ನಡುವೆ ಮಿಡಿಯುತ್ತ ಇದ್ದಾರೆ. ಆದರೆ ಅವರನ್ನು ಕೇವಲ ಪ್ರಶಂಸಿಸಿ ಸುಮ್ಮನಾಗದೆ ನಾವೂ ಅವರಂತೆ ಏನಾದರೂ ಒಂದು ಸಾಮಾಜಿಕ ಸೇವೆಗಾಗಿ ಬತ್ತದ ಉತ್ಸಾಹದಿಂದ ಅಹರ್ನಿಶಿ ದುಡಿಯುವುದು ಮುಖ್ಯ ಎಂದಿರುವ ಲೇಖಕರು ದಾವಣಗೆರೆಯ ನಿವಾಸಿಗಳು.

"ಭ್ರಷ್ಟಾಚಾರ, ದುಷ್ಟತನ, ಕೆಟ್ಟವರ ಸಂಖ್ಯೆಯೇ ಅಧಿಕವಾಗಿ, ಸಮಾಜ ಕೆಟ್ಟುಹೋಗಿದೆ" ಎನ್ನುವುದು ಎಲ್ಲೆಲ್ಲಿಯೂ ಸಹಜವಾಗಿ ಕೇಳಿಬರುವ ಮಾತು. ೧೬ನೆಯ ಶತಮಾನದ ಶೇಕ್ಸ್‌ಪಿಯರ್‌ನ ನಾಟಕ 'ಹಾಮ್ಲೆಟ್'ನಲ್ಲಿಯೂ 'ಇಡೀ ಡೆನ್ಮಾರ್ಕ್ ಕೊಳೆತುಹೋಗಿದೆ' ಎನ್ನುವ ಮಾತು ಬರುತ್ತದೆ. ಹಿಂದೆ ಗಾಂಧಿ, ಬಸವ, ಬುದ್ಧರ ಕಾಲವನ್ನು ಅವಲೋಕಿಸಿದರೆ ಆಗಲೂ ಸಮಾಜ ಕೆಟ್ಟಿದ್ದರಿಂದಲೇ ಈ ಎಲ್ಲಾ ಮಹಾತ್ಮರ, ಸಮಾಜ ಸುಧಾರಕರ ಉದಯವಾಯಿತು. ಆಶ್ಚರ್ಯಕರ ಸಂಗತಿಯೆಂದರೆ ಒಳ್ಳೆಯವರೆಂದು ಕರೆದುಕೊಳ್ಳುವವರೂ ಸಹ ಸಮಾಜವನ್ನು ನಿಂದಿಸುತ್ತಾ ಕೂರುತ್ತಾರೆಯೇ ಹೊರತು ಸತ್ಕಾರ್ಯ ಮಾಡಲು ಹೆಜ್ಜೆಗಳನ್ನೇ ಇಡುವುದಿಲ್ಲ.

ಆದರೆ ದುಷ್ಟರಿಗೆ ಹೆದರದೆ ಜನಸಂಘಟನೆ ಮಾಡಿ ಜನಜೀವನದಲ್ಲಿ ಅಪಾರ ಬದಲಾವಣೆ ತಂದವರೂ ಇದ್ದಾರೆ. ಇವರು ತಮ್ಮ ಸುತ್ತಮುತ್ತಲಿನ ವಿಕೃತಿಯನ್ನು ನೋಡಿ ಇದಕ್ಕೆ ವಿರುದ್ಧವಾಗಿ ಏನಾದರೂ ಮಾಡಲೇಬೇಕು ಎಂದು ತಮ್ಮ ಒಳಬೆಳಕಿನ ಸಹಾಯದಿಂದ ಹರಸಾಹಸ ಮಾಡಿ ಮಹತ್ವದ ಸಾಧನೆ ಮಾಡಿದ್ದಾರೆ. ಮಹಾತ್ಮಗಾಂಧಿ, ಅಬ್ರಹಾಂ ಲಿಂಕನ್, ಡಾ.ಬಿ.ಆರ್.ಅಂಬೇಡ್ಕರ್, ಮಾರ್ಟಿನ್ ಲೂಥರ್ ಕಿಂಗ್, ಮದರ್ ತೆರೇಸಾ ಇತ್ಯಾದಿ ಅನೇಕರು ದುಷ್ಟತೆಯೆಂಬ ಕತ್ತಲೆಗೆ ಹೆದರದೆ, ನಿರಾಶರಾಗದೆ, ಬೆಳಕು ಹಚ್ಚಿ ಯಶಸ್ವಿಯಾಗಿದ್ದಾರೆ.

ಹೀಗೆ ಸಮಾಜವನ್ನು ಬೈಯುತ್ತಾ ಕೈಕಟ್ಟಿ ಕೂರದೆ ಬೆಳಕು ಹಚ್ಚಿ ಇತ್ತೀಚಿನ ವರ್ಷಗಳಲ್ಲಿ ಸಮಾಜಕ್ಕೆ ಸಕಾರಾತ್ಮಕವಾಗಿ ದಾರಿದೀಪವಾಗಿರುವ ಕೆಲವರ ಕಿರು ಪರಿಚಯ ಇಲ್ಲಿದೆ. ಅವರೇ ಪ್ರತಿಷ್ಠಿತ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ವಿಜೇತೆ ಅರುಣಾರಾಯ್, ಜೋಕಿನ್ ಅರ್ಪುತಮ್ ಮತ್ತು ಪ್ರಭಾಕರ್ ನೇನೆ.

ಅರುಣಾರಾಯ್ ೧೯೪೬ರಲ್ಲಿ ಚೆನ್ನೈನಲ್ಲಿ ಜನಿಸಿದರು. ಸ್ನಾತಕೋತ್ತರ ಪದವಿಯ ನಂತರ ಅವರು ಐ.ಎ.ಎಸ್. ಮಾಡಿ ದೆಹಲಿಯಲ್ಲಿ ತಮ್ಮ ಸೇವೆ ಪ್ರಾರಂಭಿಸಿದರು. ಅಲ್ಲಿ ಬಂಕರ್ ರಾಯ್‌ರನ್ನು ಪ್ರೇಮವಿವಾಹ ಮಾಡಿಕೊಂಡರು. ಕೆಲ ವರ್ಷಗಳಲ್ಲಿ ರಾಜಸ್ಥಾನದ ಕುಗ್ರಾಮಗಳಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ನೈರ್ಮಲ್ಯ ಇತ್ಯಾದಿಗಳನ್ನು ಬಡವರಿಗೆ ಒದಗಿಸಲು ಸ್ವಯಂಸೇವಾ ಸಂಸ್ಥೆಯನ್ನು ೧೯೮೦ರಲ್ಲಿ ರಾಯ್ ಹುಟ್ಟುಹಾಕಿದರು. ಅವರು ಅದೇ ವರ್ಷ ತಮ್ಮ ಐ.ಎ.ಎಸ್. ಹುದ್ದೆಯನ್ನು ಬಿಟ್ಟು ಬಡಜನರ ಸೇವೆ ಮಾಡಲು ಗಂಡನೊಂದಿಗೆ ರಾಜಸ್ಥಾನಕ್ಕೆ ತೆರಳಿದರು. ನಂತರ ೧೯೯೦ರಲ್ಲಿ ಕೃಷಿ ಕಾರ್ಮಿಕ ಸ್ತ್ರೀಯರ ಸಂಘಟನೆ ಮಾಡಿ ಸರ್ಕಾರದಿಂದ ಅವರಿಗೆ ಸಿಗಬೇಕಾದ ನ್ಯಾಯ, ಸೌಲಭ್ಯಗಳು ಮತ್ತು ಅಭಿವೃದ್ಧಿಗಳ ಬಗ್ಗೆ ಹೋರಾಡಲು ಅನುವಾದರು. ಬಡಜನರ ಕಲ್ಯಾಣಕ್ಕಾಗಿ ಸರ್ಕಾರದ ಪ್ರತಿಯೊಂದು ಇಲಾಖೆಗೆ ಪ್ರತಿವರ್ಷ ನೀಡುವ ಬಜೆಟ್‌ನ ಸರ್ಕಾರಿ ಹಣ ಸಂಪೂರ್ಣವಾಗಿ ಬಡಜನರಿಗೆ ತಲುಪದೆ ಅಧಿಕಾರಶಾಹಿ, ರಾಜಕಾರಣಿಗಳು ಮತ್ತು ಕಂಟ್ರಾಕ್ಟರ್‌ಗಳ ಲಾಬಿಗೆ ೧ ರೂಪಾಯಿಯಲ್ಲಿ ೮೫ ಪೈಸೆ ದುರ್ವಿನಿಯೋಗವಾಗುತ್ತಿದೆ ಎಂದು ಕಂಡುಕೊಂಡರು. ಅದರ ವಿರುದ್ಧ ಸಂಘಟಿತ ಹೋರಾಟ ಮಾಡಿ, ಸಂಬಂಧಪಟ್ಟ ಇಲಾಖೆಗಳು ಹಣಕಾಸಿನ ಆದಾಯ ಮತ್ತು ಖರ್ಚಿನ ಬಗ್ಗೆ ತಮಗೆ ಮಾಹಿತಿ ನೀಡಬೇಕೆಂದು ಪಟ್ಟು ಹಿಡಿದರು.

ಇದರಿಂದ ನೌಕರಶಾಹಿ ಮತ್ತು ರಾಜಕಾರಣಿಗಳಿಂದ ಆಗುತ್ತಿರುವ ಅನೇಕ ಭ್ರಷ್ಟಾಚಾರದ ಪ್ರಕರಣಗಳು ಹೊರಬಂದವು. ಕೇಂದ್ರ ಸರ್ಕಾರ ಹಾಗೂ ಅನೇಕ ರಾಜ್ಯ ಸರ್ಕಾರಗಳು ಚಾಲ್ತಿಗೆ ತಂದಿರುವ 'ಮಾಹಿತಿ ಹಕ್ಕು' ಮೊದಲಿಗೆ

ರಾಜಸ್ಥಾನದಲ್ಲಿ ಜಾರಿಗೆ ಬರಲು ಅರುಣಾ ಕಾರಣಕರ್ತ ರಾದರು. ಇದರಿಂದಾಗಿ ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಇಂದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ನಗರಸಭೆಗಳು, ಸರ್ಕಾರೇತರ ಅನುದಾನಿತ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳಿಂದ ಆದಾಯವೆಚ್ಚ, ಸಂಬಳ, ಟಿ.ಎ. ಡಿ.ಎ. ಇತ್ಯಾದಿ ಯಾವುದೇ ಮಾಹಿತಿಯನ್ನು ನಿರ್ದಿಷ್ಟ ಫೀಸು ಪಾವತಿಸಿ ಪಡೆಯಬಹುದಾಗಿದೆ. ಜಾಗೃತ ಪ್ರಜೆಗಳು ಸರಿಯಾಗಿ ಇದನ್ನು ಬಳಸಿಕೊಂಡರೆ ಸಾಕಷ್ಟು ಮಟ್ಟಿಗೆ ಭ್ರಷ್ಟಾಚಾರ ನಿಂತು ಕಟ್ಟಕಡೆಯ ಫಲಾನುಭವಿಗೆ ಸಹಾಯ ದೊರೆಯುತ್ತದೆ.

**ಯಾರ ಜೀವನ ನಿಃಸ್ವಾರ್ಥ ಪ್ರೀತಿಯಿಂದ ಬೆಳಗುತ್ತಿದೆಯೋ ಅಂತಹ ವ್ಯಕ್ತಿಗಳು ಜಗತ್ತಿಗೆ ಬೇಕಾಗಿದ್ದಾರೆ. ಅಂತಹ ಪ್ರೇಮದಿಂದಾಡಿದ ಪ್ರತಿಯೊಂದು ನುಡಿಯೂ ಸಿಡಿಲಿನಂತೆ ಪರಿಣಾಮಕಾರಿಯಾಗುವುದು.**

—ಸ್ವಾಮಿ ವಿವೇಕಾನಂದ

ಇನ್ನೊಬ್ಬ ಇಂತಹ ಮಹಾನುಭಾವ ಶ್ರೀ ಅರ್ಪುತಮ್, ಮುಂಬಯಿನ ಕೊಳೆಗೇರಿಯೊಂದರಲ್ಲಿ ಪತ್ನಿ ರೀಟಾ ಹಾಗೂ ಇಬ್ಬರು ಯುವ ಹೆಣ್ಣು ಮಕ್ಕಳೊಂದಿಗೆ ಇವರು ವಾಸಿಸುತ್ತಿರುವರು. ಇವರ ತಂದೆ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ತಮ್ಮ ಸಂಪತ್ತನ್ನೆಲ್ಲಾ ಅದರಲ್ಲಿ ಕಳೆದುಕೊಂಡರು. ಜೀವನೋಪಾಯಕ್ಕಾಗಿ ಅನಿವಾರ್ಯವಾಗಿ ಮುಂಬಯಿಗೆ ಅರ್ಪುತಮ್ ವಲಸೆ ಬಂದರು. ಜನತಾ ಕಾಲೋನಿ ಎನ್ನುವ ಕೊಳೆಗೇರಿಯಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ಪಡೆದು ಸಂಸಾರ ನಿರ್ವಹಣೆಗೆ ಚರಂಡಿ ಸ್ವಚ್ಛ ಮಾಡುವುದು, ಅಡುಗೆ ಮತ್ತು ಬಡಗಿ ಕೆಲಸ ಮಾಡಲು ಪ್ರಾರಂಭಿಸಿದರು. ಸ್ಥಳೀಯ ಆಡಳಿತ ಯಂತ್ರ ಆ ಕೊಳೆಗೇರಿಯಲ್ಲಿನ ಮನೆಗಳನ್ನು ಕೆಡವಿಹಾಕಿದ್ದರಿಂದ ಆತ ಬೀದಿಪಾಲಾಗಬೇಕಾಯಿತು. ಆದರೆ ಅರ್ಪುತಮ್ ಛಲ ಮತ್ತು ಕೆಚ್ಚೆದೆಯಿಂದ ಹೋರಾಟಕ್ಕಿಳಿದರು. ಅವರು ರಾಷ್ಟ್ರೀಯ ಕೊಳೆಗೇರಿ ವಾಸಿಗಳ ಫೆಡರೇಷನ್ನನ್ನು (National Slum Dwellers' Federation) ಸ್ಥಾಪಿಸಿ ಸುಪ್ರೀಂ ಕೋರ್ಟಿನಲ್ಲಿ ತಮ್ಮ ಕೊಳೆಗೇರಿಬಂಧುಗಳ ವಸತಿಗಾಗಿ ಹಕ್ಕೊತ್ತಾಯ ತಂದರು. ಇದರಿಂದ ೫೦,೦೦೦ ಜನ ಕೊಳೆಗೇರಿ ವಾಸಿಗಳಿಗೆ ಸರ್ಕಾರವು ಬದಲಿ ನಿವೇಶನ ನೀಡುವಂತಾಯಿತು. ೧೯೮೬ರಲ್ಲಿ ಕೊಳಗೇರಿ ಮಹಿಳಾ ನಿವಾಸಿಗಳಿಗಾಗಿ 'ಮಹಿಳಾ ಮಿಲನ್' ಎನ್ನುವ ಸ್ವಯಂ ಸೇವಾ ಸಂಸ್ಥೆಯನ್ನೂ ಅರ್ಪುತಮ್ ಸ್ಥಾಪಿಸಿದರು.

ಇಂದು NSDE (National Slum Dwellers' Federation) ಮತ್ತು 'ಮಹಿಳಾ ಮಿಲನ್' ಭಾರತ ಹಾಗೂ ಇತರ ದೇಶಗಳಲ್ಲಿ ಕೊಳೆಗೇರಿವಾಸಿಗಳಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಲಂಚ ಎಲ್ಲಾ ಹಂತಗಳಲ್ಲಿಯೂ ಬೇರು ಬಿಟ್ಟಿದೆ ಎಂದು ಕೇವಲ ಮಾತನಾಡುವ ಜನರಿಗೆ ಒಂದು ಅಪವಾದ ಎನ್ನುವಂತೆ ಹೋರಾಟಕ್ಕಿಳಿದ ಮತ್ತೊಬ್ಬ ಮಹಾನುಭಾವ ಮುಂಬಯಿಯ ಶ್ರೀ ಪ್ರಭಾಕರ್ ನೇನೆ. ಅಶುದ್ಧ ಪರಿಸರದಿಂದ, ನೀರು, ಮತ್ತು ಆಹಾರ ಕಲಬೆರಕೆಯಿಂದಾಗಿ ಮೂರನೇ ವರ್ಷದ ಬಿ.ಇ.ಯಲ್ಲಿ ಓದುತ್ತಿದ್ದ ೨೦ ವರ್ಷ ವಯಸ್ಸಿನ, ಇವರ ಪ್ರತಿಭಾವಂತ ಮಗ ಅಜಯ್‌ನ ಸಾವು ಸಂಭವಿಸಿತು. ಪುತ್ರಶೋಕದ ಹೃದಯಭಾರದಿಂದ ನಾಲ್ಕು ವರ್ಷ ತೀವ್ರ ಖಿನ್ನತೆ ಅನುಭವಿಸಿದ ಪ್ರಭಾಕರ್, ಪರಿಸರವನ್ನು ಹಸನುಗೊಳಿಸಲು ತೀರ್ಮಾನಿಸಿದರು. ಅಂದಿನಿಂದಲೇ ಮುಂಬಯಿಯನ್ನು ಸ್ವಚ್ಛಗೊಳಿಸಲು ತಮ್ಮ ಶಕ್ತಿಯನ್ನು ವಿನಿಯೋಗಿಸ ತೊಡಗಿದರು.

ಇಂದು ಮುಂಬಯಿಯಲ್ಲಿ ನೇನೆ ಅವರ ಮನೆಯಿರುವ ದಾದರ್ ಪ್ರದೇಶ ಸ್ವಚ್ಛತೆಯಿಂದ ನಳನಳಿಸುತ್ತಿದೆ. ಅವರು ಬೀದಿಗಾಡಿಗಳಲ್ಲಿ ಮಾರಾಟ ಮಾಡುವವರು ಉಂಟುಮಾಡುವ ಕೊಳಕಿನ ವಿರುದ್ಧ ನಿರಂತರ ಹೋರಾಟ ನಡೆಸುತ್ತಲೇ ಇದ್ದಾರೆ. ಮುಂದೆ ನಾಗರಿಕರ ಮನವೊಲಿಸಿ 'ನಗರ ರಕ್ಷಿತಾ ಸಮಿತಿ' ಪ್ರಾರಂಭಿಸಿ ಮನೆಯ ಸುತ್ತಮುತ್ತ, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿ ಇಡಲು ಪ್ರೇರೇಪಿಸಿದ್ದಾರೆ. "ನಾವೇ ರಸ್ತೆಗಳನ್ನು ಸ್ವಚ್ಛ ಮಾಡುತ್ತ ಹೋಗುವುದಿಲ್ಲ. ಬದಲಿಗೆ, 'ಕಸವನ್ನೆಲ್ಲಾ ಚೀಲಗಳಲ್ಲಿ ತುಂಬಿಟ್ಟುಕೊಂಡು, ಮರುದಿನ ಬರುವ ಗಾಡಿಗೆ ನೇರವಾಗಿ ಹಾಕಿ. ರಸ್ತೆಯಲ್ಲಿ, ಖಾಲಿ ಸೈಟುಗಳಲ್ಲಿ ಚೆಲ್ಲಬೇಡಿ' ಎಂದು ಜನರ ಮನವೊಲಿಸುತ್ತಿದ್ದೇವೆ" ಎನ್ನುತ್ತಾರೆ ನೇನೆ.

ಪ್ರಭಾಕರ್ ನೇನೆ ಭ್ರಷ್ಟಾಚಾರ ತಡೆಗಟ್ಟಲು ತಮ್ಮದೇ ಆದ ಹಾದಿ ಕಂಡುಕೊಂಡಿದ್ದಾರೆ. ಭ್ರಷ್ಟಾಚಾರ ನಡೆಯುತ್ತಿದೆ ಎಂದು ತಿಳಿದುಬಂದ ಕಛೇರಿಗೆ ತಮ್ಮ ಸದಸ್ಯರೊಂದಿಗೆ ಹೋಗಿ ದೊಡ್ಡದಾಗಿ "ಭ್ರಷ್ಟಾಚಾರವನ್ನು ಇಲ್ಲಿಂದ ನಿರ್ನಾಮಗೊಳಿಸಿ" ಎಂದು ಬೋರ್ಡ್ ಹಾಕುತ್ತಾರೆ. ಇದರಿಂದ ಲಂಚ ನಿರ್ಮೂಲನೆಯಲ್ಲಿ ಬಹಳಷ್ಟು ಸಕಾರಾತ್ಮಕ ಪರಿಣಾಮವಾಗಿದೆ ಎಂದು ಅವರು ನುಡಿಯುತ್ತಾರೆ.

ಜೀವನದಲ್ಲಿ ಘಟಿಸಿದ ದುರಂತಗಳೇ ಸಮಾಜ ಸೇವೆಗೆ ನಾಂದಿಯಾದ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಅವನ್ನು ದಾರಿದೀಪ ಮಾಡಿಕೊಂಡು ಬೆಳಕನ್ನು ಚೆಲ್ಲುವ ದಾರಿಯಲ್ಲಿ ಮುಂದುವರಿಯೋಣವೇ...? ಕತ್ತಲನ್ನು ಶಪಿಸಿ ಗೊಣಗುತ್ತ ಕೂರುವ ಬದಲಾಗಿ ಪರದೆಯನ್ನು ಹಿಂದಕ್ಕೆ ಸರಿಸಿ ಒಂದು ಸಣ್ಣ ದೀಪವನ್ನು ಹಚ್ಚಿ ಬೆಳಕು ಚೆಲ್ಲುವ ಪ್ರಯತ್ನಕ್ಕೆ ಇಂದೇ ತಯಾರಾಗೋಣವೇ...? ✪